ಶ್ರೀ ಕೆ.ಎಂ. ಕೃಷ್ಣಾರೆಡ್ಡಿ. —ಸನ್ಮಾನ್ಯ ಅಧ್ಯಕ್ಷರೇ, ಶಿಕಾರಿಪುರ ತಾಲ್ಲೂಕು ಅಭಿವೃದ್ಧಿ ಕಾಮಗಾರಿಗಳಿಗೆ ಜಲ್ಲಿ ಮತ್ತು ಸೈಜ್ ಕಲ್ಲುಗಳನ್ನು ಕಾಮಟ್ಟು ಅರಣ್ಯ ಪ್ರದೇಶಗಳಲ್ಲಿರುವ ಕ್ವಾರಿಗಳಿಂದ ಪೂರೈಸಲಾಗುತ್ತಿದೆ. ಈ ಪ್ರದೇಶದ ಎಲ್ಲ ಕ್ವಾರಿಗಳೂ ೩೦-೪೦ ವರ್ಷಗಳ ಹಿಂದೆ ಲೀಸ್‌ಕೊಟ್ಟಿರುವುದಾಗಿದೆ. ಆದರೆ ನವೆಂಬರ್ ೧೯೭೮ರ ಅಂತ್ಯದ ಸರ್ಕಾರಿಗೆ ಅರಣ್ಯ ಇಲಾಖೆ ಯವರು ಈ ಕ್ವಾರಿಗಳಿಂದ ಜಲ್ಲಿಕಲ್ಲುಗಳನ್ನು ತೆಗೆಯಲು ಅವಕಾಶ ಕೊಡದೇ ತಡೆದಿದ್ದರು. ಈ ಬಗ್ಗೆ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳನ್ನು, ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ಸಂಪರ್ಕಿಸಿ, ಇದರಿಂದ ಶಿಕಾರಿಪುರ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವ ಪರಿಸ್ಥಿತಿಯನ್ನು ನಿವಾರಿಸಿ ಸಹಕರಿಸಲಾಗಿದೆ, ಪರಿಸ್ಥಿತಿಯ ಅರಣ್ಯ ಸಂರಕ್ಷಣಾಧಿಕಾರಿಗಳು ಕೆಲವು ಷರತ್ತುಗಳೊಂದಿಗೆ ಜಲ್ಲಿಕಲ್ಲುಗಳನ್ನು ಈ ಕ್ವಾರಿಗಳಿಂದ ಪಡೆಯಲು ೧೭-೧೦-೮೮ ರಿಂದ ಅನುಮತಿಯನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಸದಸ್ಯರೂ ಸಹ ಮುಖ್ಯಮಂತ್ರಿಗಳೊಂದಿಗೆ ಇದರ ಬಗ್ಗೆ ಚರ್ಚೆ ಮಾಡಿದಾಗ ಅರಣ್ಯ ಇಲಾಖಾ ಅಧಿಕಾರಿಗಳನ್ನು ಸಂಪರ್ಕಿಸಿ, ಈಗ ಆ ಎಲ್ಲಾ ಕ್ವಾರಿಗಳಿಂದ ಜಲ್ಲಿಕಲ್ಲುಗಳನ್ನು ಕಾಂಟ್ರಾಕ್ಟರ್ಸ್ ಮತ್ತು ಇಲಾಖೆಯವರು ತರುತ್ತಿದ್ದಾರೆ ಎಂದು ನಾನು ಸನ್ಮಾನ್ಯ ಸದಸ್ಯರಿಗೆ ಅರ್ಥವಾಗುವಂತೆ ಕೊಡುತ್ತೇನೆ.

ಶ್ರೀ ಬಿ.ಜಿ. ಮುಗಳಿ ಶ್ರೀ —ಮಾನ್ಯ ಅಧ್ಯಕ್ಷರೇ, ನನ್ನದೊಂದು ವಿನಂತಿ ಏಂದರೆ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ಅರಣ್ಯ ಅಧಿಕಾರಿಗಳು ತಡೆಯಲಿ. ನಾವು ಕಳ್ಳಸಾಗಾಣಿಕೆ ತಡೆಯಲಿ. ಮೈನ್ಸ್ ಆಂಡ್ ಜಿಯಾಲಜಿಯಿಂದ ಅಧ್ಯಾಪ್ ಆಗಿದ್ದಂಥ ಕ್ವಾರಿಗಳಿಂದ ಕಲ್ಲು ತರುವುದನ್ನು ತಡೆಯುವುದು ತಪ್ಪಲ್ಲವೇ? ಈಗ ಲಕ್ಷಾಂತರ ಖರ್ಚು ಮಾಡಿ ಆಂಡ್ರಾಡ್ ಲಾರ್ಜಾಟಿಕ್ ಮಾಡುತ್ತಿದ್ದೀವಿ. ಅದರಲ್ಲಿ ಸಾಕಷ್ಟು ಕಲ್ಲುಗುಡ್ಡಗಳಿವೆ. ಪ್ರೈವೇಟಾನವರನ್ನು ತಡೆಯುವುದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಟಿಡಬ್ಲ್ಯೂಡಿ. ಲಿಸ್ಟಿಯನ್ನು ಸೀಜ್ ಮಾಡಿದ್ದಾರೆ ಎಂ.ಐ. ಲಿಸ್ಟಿಯನ್ನು ಸೀಜ್ ಮಾಡಿದ್ದಾರೆ. ನಾನು ಒಬ್ಬ ಶಾಸಕನಾಗಿ ಹೇಗೆ ಹೊರಬರಬೇಕೆಂಬ ಕೆಲಸ ಮಾಡಬೇಕಾಯಿತು. ಸೂರಿಟೆಂಡಿಂಗ್ ಇಂಜಿನಿಯರ್ ಹತ್ತಿರ, ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರ ಹತ್ತಿರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಪತ್ರ ವ್ಯವಹಾರ ಮಾಡಿದ್ದೇನೆ. ತಾಲ್ಲೂಕಾ ಪಂಚಾಯತ್ ಸಮಿತಿ ಸಭೆಗೆ ಅಧಿಕಾರಿಗಳನ್ನು ಕರೆದು ಅಭಿವೃದ್ಧಿ ಕೆಲಸಗಳಿಗೆ ತಡೆ ಮಾಡಬೇಡಿ ಎಂದು ಹೇಳಿದ್ದೇನೆ. ರಾಯಲ್ಟಿ ನಮ್ಮ ಅರಣ್ಯ ಇಲಾಖೆಗೆ ಬರಬೇಕೆಂದು ಹೇಳಿದರು. ಹಾಗಿದ್ದರೆ ಮೇಲಿನ ಅಧಿಕಾರಿಗಳ ಹತ್ತಿರ ಹೋಗಿ ಆರ್ಡರ್ ಮಾಡಿಸಿ, ಈಗ ಪಿಡಬ್ಲ್ಯೂಡಿ.ಯವರು ಏನು ರಾಯಲ್ಟಿ ಕೊಡುತ್ತಿದ್ದಾರೆ ಅದು ನಮಗೆ ಬರ ಬೇಕೆಂದು ಮಾಡಿಸಿ, ಈ ರೀತಿ ತಡೆ ಮಾಡಬೇಡಿ ಎಂದು ಹೇಳಿದೆ. ಶಿಕಾರಿಪುರ ತಾಲ್ಲೂಕಿಗ ಸೀಮಿತ ವಾಗಿ ನಾನು ಮಾತನಾಡುತ್ತಿಲ್ಲ. ಇನ್ನು ಮುಂದಾದರೂ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳ ಮನಃಪರಿವರ್ತನೆ ಯಿಂದ ಆಗಬೇಕಾಗಿದೆ. ಅವರಿಗೆ ಮಾಡುವುದಕ್ಕೆ ಬೇರೆ ಕೆಲಸ ಇದೆ. ಶ್ರೀಗಂಧದ ಕಳ್ಳಸಾಗಾಣಿಕೆ ತಡೆಯಲಿ. ಈ ಕೆಲಸ ಮಾಡುವುದಕ್ಕೆ ಅವರನ್ನು ವಿಶಕ್ಕೆ ಹಚ್ಚಿದ್ದೀವಿ. ಇನ್ನು ಮುಂದೆ ನನ್ನ ತಾಲ್ಲೂಕಿನಲ್ಲಿ ಈ ರೀತಿ ತೊಂದರೆಯಾಗದಂತೆ ಆಶ್ವಾಸನೆ ಕೊಡಬೇಕೆಂದು ಕೇಳುತ್ತೇನೆ. ಅಲ್ಲಿ ಕೆಲಸ ಆಗಿಲ್ಲ. ಕಳೆದ ಮೂರು ತಿಂಗಳಲ್ಲಿ ಒಂದು ಕಿಲೋಮೀಟರ್ ರಸ್ತೆ ಕೆಲಸ ಆಗಿದ್ದರೆ ತಾವು ಹೇಳಿ ನೋಡೋಣ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ —ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಅಧಿಕಾರಿಗಳು ಕಾಡಿನಲ್ಲಿರುವ ಕ್ವಾರಿ ಗಳಿಂದ ಕಲ್ಲು ತರುವಾಗ ಜೊತೆಯಾಗಿ ದಾರಿ ಮಾಡುವುದಕ್ಕೆ ಮರಗಿಡಗಳನ್ನು ಕಡಿಯುತ್ತಾರೆ ಎಂಬ ದೃಷ್ಟಿಯಿಂದ ತಡೆ ಹಿಡಿದಿದ್ದಾರು. ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ ಮೇಲೆ ಈ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಈ ಅಧಿಕಾರಿಗಳು ಲೋಕೋಪಯೋಗಿ ಇಲಾಖೆ ಅಧಿಕಾರಿ ಗಳೊಂದಿಗೆ ಚರ್ಚೆ ಮಾಡಿದ್ದಾರೆ. ಈಗ ಯಾವುದಾದರೂ ಎಲ್ಲಾ ಕ್ವಾರಿಸ್‌ನಿಂದ ಕಲ್ಲು ತರುತ್ತಿದ್ದಾರೆ. ಇನ್ನು ಮುಂದೆ ಈ ರೀತಿ ಅವ್ಯವಸ್ಥೆ ಆಗದಂತೆ ನೋಡಿಕೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಕರ್ನಾಟಕ ಲೋಕಾ. ಯುಕ್ತದ ಬಗ್ಗೆ

೧೪೮(೫೧೭) ಶ್ರೀ ಬಿ. ಲಕ್ಷ್ಮಪ್ಪ (ಚಿಕ್ಕನಾಯಕನ ಹಳ್ಳಿ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ಸರಕಾರಿ ನೌಕರರ ಹಾಗೂ ಅವರಿಗೆ ಭಾರತೀಯ ದಂಡ ಸಂಹಿತೆ (ಐ. ಪಿ. ಸಿ.) ಅನ್ವಯಿಸುವುದೇ ?

ಆ) ಲೋಕಾಯುಕ್ತರು ಉಪಲೋಕಾಯುಕ್ತರು ಅಧಿಕಾರಕ್ಕೆ ಬಂದಂದಿನಿಂದ ಒಟ್ಟು ಎಷ್ಟು ಪ್ರಕರಣಗಳಲ್ಲಿ ಅಧಿಕಾರಿಗಳನ್ನು ಪ್ರಾಸಿಕ್ಯೂಟ್ ಮಾಡಿದ್ದಾರೆ ಮತ್ತು ಬಿಡುಗಡೆ ಮಾಡಿದ್ದಾರೆ ?

ಇ) ಎಷ್ಟು ಪ್ರಕರಣಗಳನ್ನು ತಳ್ಳಿಹಾಕಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಆ) ಲೋಕಾಯುಕ್ತ ಮತ್ತು ಉಪಲೋಕಾಯುಕ್ತರು ಸರ್ಕಾರಿ ನೌಕರರಲ್ಲ. ಆದಾಗ್ಯೂ ಭಾರತೀಯ ದಂಡ ಸಂಹಿತೆ ಇವರುಗಳಿಗೆ ಅನ್ವಯಿಸುತ್ತದೆ.

ಆ) ಲೋಕಾಯುಕ್ತರಿಗೆ ಮತ್ತು ಉಪಲೋಕಾಯುಕ್ತರಿಗೆ ಮೊಖಿದ್ದಮೆಗಳನ್ನು ನಡೆಸುವ ಅಧಿಕಾರ ಇಲ್ಲ. ಆದುದರಿಂದ ಅವರು ಯಾರನ್ನೂ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) (ಆ) ಭಾಗದ ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆಗೆ ಪ್ರತ್ಯೇಕ ಉತ್ತರ ಉದ್ಭವಿಸುವುದಿಲ್ಲ.

೫–೦೦ ಪಿ.ಎಂ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತಗಳು ಇದುವರೆಗೆ ಎಷ್ಟು ಪ್ರಕರಣಗಳಲ್ಲಿ ವಿಚಾರಣೆ ಮಾಡಿ ತೀರ್ಪು ನೀಡಿವೆ ? ಜೊತೆಗೆ ಎಷ್ಟು ಪ್ರಕರಣಗಳಲ್ಲಿ ಲೋಕಾಯುಕ್ತ ಆಕ್ಟ್ ೫–ಎ ಪ್ರಕಾರ ವಿಚಾರಣೆಯನ್ನು ಕೈಬಿಡಲಾಗಿದೆ ? ಎಂದು ಎರಡು ಪ್ರಶ್ನೆಯನ್ನು ನಾನು ಕೇಳಿದ್ದೇನೆ. ನಾನು ಕೇಳಿದ್ದ ಪ್ರಶ್ನೆಯಲ್ಲಿ ಈ ರೀತಿ ಏತಕ್ಕೆ ವ್ಯತ್ಯಾಸ ಆಯಿತೋ ಗೊತ್ತಿಲ್ಲ. ದಯವಾಡಿ ಇದಕ್ಕೆ ಉತ್ತರ ಹೇಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸದಸ್ಯರು ಪ್ರಶ್ನೆ ಕೇಳಿದಷ್ಟಕ್ಕೆ ಉತ್ತರ ಕೊಟ್ಟಿದ್ದೇನೆ. ಇನ್ನು ಹೆಚ್ಚಿನ ವಿವರಗಳು ಬೇಕಾದರೆ ನಾನು ವಿವರಗಳನ್ನು ತರಿಸಿಕೊಂಡು ಹೇಳುತ್ತೇನೆ. ಇವತ್ತು ನನ್ನ ಹತ್ತಿರ ಮಾಹಿತಿ ಇಲ್ಲ.

ರಾಜ್ಯ ಸರಕಾರಿ ಸೇವೆಗಳಲ್ಲಿ ಪ್ರಾದೇಶಿಕ ಪ್ರಾತಿನಿಧ್ಯ

೧೯೦(೩೧೦) ಶ್ರೀಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯ ಸರಕಾರಿ ಸೇವೆಗಳಲ್ಲಿ ಕಾಣಿಸಿಕೊಂಡಿರುವ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ನೇಮಕಗೊಂಡ ಕಡಪಟ್ಟಿ ನೇತೃತ್ವದ ಸಮಿತಿಯು ವರದಿಯನ್ನು ಸಲ್ಲಿಸಿದ್ದರೆ, ಹಾಗಿದ್ದಲ್ಲಿ ಯಾವಾಗ ಸಲ್ಲಿಸಲಾಗಿದೆ?

ಆ) ಈ ವರದಿಯನ್ನು ಜಾರಿಗೊಳಿಸಲು ಕೈಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ, (ಮುಖ್ಯ ಮಂತ್ರಿಗಳು).—

ಅ) ಶ್ರೀ ಎಸ್. ಎಸ್. ಕಡಪಟ್ಟಿ, ವಿಧಾನ ಸಭಾ ಸದಸ್ಯರವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ದಿನಾಂಕ ೪–೫–೧೯೮೭ ರಂದು ಸರ್ಕಾರಕ್ಕೆ ಒಂದು ಮಧ್ಯಂತರ ವರದಿಯನ್ನು ಸಲ್ಲಿಸಿತು.

ಆ) ಈ ವರದಿಯ ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಸೂಚನೆಗಳನ್ನು ಈಗಾಗಲೇ ದಿನಾಂಕ ೨೪–೯–೮೮ ರಂದು ಹೊರಡಿಸಿದೆ. ಇದಕ್ಕೆ ಸಂಬಂಧಪಟ್ಟ ಆದೇಶವನ್ನು ಸಹ ಪೂರ್ತಿ ಓದುತ್ತೇನೆ ಆಮೇಲೆ ತಾವು ಪ್ರಶ್ನೆ ಕೇಳಿ. ರಾಜ್ಯ ಸರ್ಕಾರದ ನೇಮಕಾತಿ ಪಟ್ಟಿ ಕೊಟ್ಟಿದ್ದೇನೆ. ಆದರಲ್ಲಿ ಯಾವ ಯಾವ ರೀತಿಯಲ್ಲಿ ಆಯ್ಕೆ ಮಾಡಬೇಕಾದುದನ್ನು ಸಹ ತಿಳಿಸಲಾಗಿದೆ. ಅದು ಈ ರೀತಿ ಇದೆ. ರಾಜ್ಯ ಸರ್ಕಾರ ಸೇವೆಗೆ ನೇಮಕಾತಿ ಮಾಡುವಾಗ ಅಥವಾ ಶಾಲಾ ಕಾಲೇಜುಗಳಿ ಪ್ರವೇಶ ಮಾಡಿಸುವಾಗ ಪ್ರಾದೇಶಿಕ ತಾರತಮ್ಯ ಇದೆ ಎನ್ನುವ ಸಲುವಾಗಿ ಅದನ್ನು ಪರಿಶೀಲಿಸಲು